
# ಎಲ್ಲರಿಗೂ ಜೀವರಕ್ಷಕ ವ್ಯವಸ್ಥೆ ಉಚಿತ



ಐವತ್ತರ ಹರೆಯದ ಕೆಂಪಣ್ಣ ರಾಮನಗರದ ಸಮೀಪದ ಹಳ್ಳಿಯೊಂದರ ರೈತ. ಸಣ್ಣ ಮಟ್ಟದ ವ್ಯವಸಾಯ ಮಾಡಿಕೊಂಡು ಸಂತೃಪ್ತ ಜೀವನವನ್ನು ಸಾಗಿಸಿಕೊಂಡಿದ್ದ. ಆದರೆ, ಆತನ ಜೀವನದಲ್ಲಿ ದೊಡ್ಡ ಆಘಾತ ತಂದಿದ್ದು ಕಿಡ್ನಿ ಸಮಸ್ಯೆ. ರಕ್ತ ಮರುಪೂರಣ ಮಾಡುವ ಸ್ಥಿತಿಗೆ ತಲುಪಿದ್ದು, ಜೀವನವನ್ನೇ ಅಸಹನೀಯವಾಗಿಸಿತ್ತು. ಆದರೂ ಅನಿವಾರ್ಯವಾಗಿತ್ತು. ಆತನ ಕೈಯಲ್ಲಿ ದುಡ್ಡಿರಲಿಲ್ಲ.

ಈ ಹಂತದಲ್ಲಿ ಕೆಂಪಣ್ಣನಿಗೆ ನೆರವಿಗೆ ಬಂದದ್ದು, ಜಿಲ್ಲೆಯ ಸರ್ಕಾರಿ ಆಸ್ಪತ್ರೆಯಲ್ಲಿದ್ದ ಡಯಾಲಿಸಿಸ್ ಘಟಕ. ಖಾಸಗಿಯಲ್ಲಿ ಒಂದು ಬಾರಿ ಡಯಾಲಿಸಿಸ್ ಮಾಡಿಸಿಕೊಳ್ಳಲು ₹ 1200 ರಿಂದ ₹ 1300 ಆಗುತ್ತದೆ. ಆದರೆ, ಸರ್ಕಾರಿ ಆಸ್ಪತ್ರೆಯಲ್ಲಿ ಉಚಿತವಾಗಿ ಡಯಾಲಿಸಿಸ್ ಮಾಡಿಸಿಕೊಳ್ಳಲಾರಂಭಿಸಿದ ಬಳಿಕ ಇನ್ನಷ್ಟು ಕಾಲ ಬದುಕುವ ಆಸೆ ಚಿಗುರಿತು. ವೈದ್ಯರ ಸಲಹೆಯ ಮೇರೆಗೆ ನಿಯಮಿತವಾಗಿ ಡಯಾಲಿಸಿಸ್ ಮಾಡಿಸಿಕೊಳ್ಳುತ್ತಿದ್ದಾರೆ.

ಡಯಾಲಿಸಿಸ್ ಒಂದು ಕಾಲಕ್ಕೆ ಹಣವಂತರು ಮಾತ್ರ ಮಾಡಿಸಿಕೊಳ್ಳಬಹುದಾಗಿದ್ದ ದುಬಾರಿ ಚಿಕಿತ್ಸೆಯಾಗಿತ್ತು. ಅಲ್ಲದೆ, ಈ ಘಟಕಗಳು ದೊಡ್ಡ ಊರುಗಳಲ್ಲಿ ಮಾತ್ರ ಲಭ್ಯವಿತ್ತು. ದಿನೇ ದಿನೇ ಶ್ರೀಮಂತರು ಮತ್ತು ಬಡವರು ಎಂಬ ತಾರತಮ್ಯವಿಲ್ಲದೆ, ಮೂತ್ರಪಿಂಡ ಸಮಸ್ಯೆ ಎಲ್ಲರಲ್ಲೂ ಕಾಣಿಸಿಕೊಳ್ಳತೊಡಗಿದೆ. ಬಡ ಮತ್ತು ಮಧ್ಯಮ ವರ್ಗದ ರೋಗಿಗಳು ಚಿಕಿತ್ಸೆಗಾಗಿ ದುಬಾರಿ ಶುಲ್ಕವನ್ನು ಭರಿಸಲಾಗದೇ, ರೋಗಿಯ ಜೀವವನ್ನು ಉಳಿಸಿಕೊಳ್ಳಲಾಗದೇ ಸಂಕಷ್ಟದಲ್ಲಿ ಸಿಲುಕಿದ್ದಾರೆ. ಹಣ ಭರಿಸಿ ಚಿಕಿತ್ಸೆಯನ್ನು ಕೊಡಿಸಲಾಗದೇ ಎಷ್ಟೊ ರೋಗಿಗಳ ಪ್ರಾಣ ಹೋಗಿವೆ. ಇಂತಹ ಕುಟುಂಬಗಳ ನೋವು  ಅರಿತು, ಅದಕ್ಕೊಂದು ಪರಿಹಾರ ಒದಗಿಸಬೇಕು. ಬಡವರ ಅಮೂಲ್ಯ ಪ್ರಾಣ ಉಳಿಸಬೇಕು ಎಂಬ ಕಲ್ಪನೆ ಮೂಡಿದ್ದೇ ಆರೋಗ್ಯ ಸಚಿವ ಕೆ.ಆರ್.ರಮೇಶ್‌ಕುಮಾರ್ ಅವರಿಗೆ.




ಇದರ ಪರಿಣಾಮ ರಾಜ್ಯ ಸರ್ಕಾರ ಜಿಲ್ಲಾ ಕೇಂದ್ರಗಳು ಮಾತ್ರವಲ್ಲದೆ, ಎಲ್ಲ 176 ತಾಲ್ಲೂಕು ಮಟ್ಟದ ಆಸ್ಪತ್ರೆಗಳಲ್ಲಿ ಡಯಾಲಿಸಿಸ್ ಘಟಕಗಳನ್ನು ಸ್ಥಾಪಿಸಲು ಮುಂದಾಯಿತು. ಇಲ್ಲಿಯವರೆಗೆ 71 ಆಸ್ಪತ್ರೆಗಳಲ್ಲಿ ಈ ವ್ಯವಸ್ಥೆಯನ್ನು ಅಳವಡಿಸಲಾಗಿದೆ. 100 ಕೇಂದ್ರಗಳನ್ನು ಮಾರ್ಚ್ 2018ರೊಳಗೆ ಆರಂಭಿಸಲಾಗುವುದು. 'ಸರ್ಕಾರಿ ಆಸ್ಪತ್ರೆಯಲ್ಲಿ ಎಪಿಎಲ್, ಬಿಪಿಎಲ್ ಎಂಬ ತಾರತಮ್ಯವಿಲ್ಲದೆ ಎಲ್ಲ ರೋಗಿಗಳಿಗೂ ಡಯಾಲಿಸಿಸ್ ಸೌಲಭ್ಯಗಳನ್ನು ನೀಡುತ್ತೇವೆ. ರೋಗಿಗಳಲ್ಲಿ ಬೇಧ ಮಾಡುವುದಿಲ್ಲ. ಸರ್ಕಾರದ ಆರೋಗ್ಯದ ಸೇವೆ ಎಲ್ಲರಿಗೂ ಸಿಗಬೇಕು ಎಂಬುದೇ ನಮ್ಮ ಆಶಯ' ಎನ್ನುತ್ತಾರೆ ಸಚಿವ ರಮೇಶ್‌ಕುಮಾರ್.

## 'ಗೋಲ್ಡನ್ ಅವರ್'ನಲ್ಲಿ ಚಿಕಿತ್ಸೆ:

ಅಪಘಾತ ಸೇರಿದಂತೆ ಎಷ್ಟೋ ಆರೋಗ್ಯ ಸಮಸ್ಯೆಗಳಿಗೆ ತುರ್ತು ಚಿಕಿತ್ಸೆ ನೀಡಬೇಕಾಗುತ್ತದೆ. ಇದಕ್ಕಾಗಿ ತುರ್ತು ನಿಗಾ ಘಟಕಗಳ (ಐಸಿಯು) ಅಗತ್ಯವಿರುತ್ತದೆ. ಇಲ್ಲವಾದರೆ ರೋಗಿಯ ಪ್ರಾಣ ಪಕ್ಷಿಯೇ ಹಾರಿ ಹೋಗುತ್ತದೆ. ಇಂತಹ ರೋಗಿಗಳಿಗೆ ನಿಗದಿತ ಸಮಯದೊಳಗೆ ಐಸಿಯುದಲ್ಲಿಟ್ಟು  ಚಿಕಿತ್ಸೆ ನೀಡಬೇಕು. ಈ ಚಿಕಿತ್ಸಾ ಸಮಯಕ್ಕೆ 'ಗೋಲ್ಡನ್ ಅವರ್' ಎಂದು ಕರೆಯಲಾಗುತ್ತದೆ. ಇಂತಹ ವ್ಯವಸ್ಥೆ ತೀರಾ ಇತ್ತೀಚಿನವರೆಗೆ ವೈದ್ಯಕೀಯ ಮೆಡಿಕಲ್ ಕಾಲೇಜು ಮತ್ತು ಖಾಸಗಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳಲ್ಲಿ ಮಾತ್ರ ಲಭ್ಯವಿತ್ತು. ಇದಕ್ಕಾಗಿ ಸಾವಿರಾರು ರೂಪಾಯಿಗಳನ್ನು ಖರ್ಚು ಮಾಡಬೇಕಾಗುತ್ತಿತ್ತು. ರಾಜ್ಯ ಸರ್ಕಾರ ದೂರದೃಷ್ಟಿಯಿಂದ ತುರ್ತು ನಿಗಾ ಘಟಕಗಳನ್ನು ರಾಜ್ಯದ ತಾಲ್ಲೂಕು ಮಟ್ಟದಲ್ಲಿ ಪ್ರಾರಂಭಿಸಲು ಉದ್ದೇಶಿಸಿದ್ದು ಈಗಾಗಲೇ 12 ಘಟಕಗಳು ಕಾರ್ಯನಿರ್ವಹಿಸುತ್ತಿವೆ. ಈಗಾಗಲೇ 100 ಕೇಂದ್ರಗಳಲ್ಲಿ ಅವಶ್ಯವಿರುವ ಸಿವಿಲ್ ಕಾಮಗಾರಿಗಳು ಪೂರ್ಣಗೊಂಡಿದೆ. ಮಾರ್ಚ್‌ನಲ್ಲಿ ಎಲ್ಲ ಘಟಕಗಳೂ ಪೂರ್ಣ ಪ್ರಮಾಣದಲ್ಲಿ ಕಾರ್ಯಾರಂಭ ಮಾಡಲಿವೆ.

## ಬಡವರಿಗೂ ಸಿ.ಟಿ ಸ್ಕ್ಯಾನ್ ಮತ್ತು ಎಂಆರ್‌ಐ ಸೇವೆ:

ಸಿ.ಟಿ ಸ್ಕ್ಯಾನ್ ಮತ್ತು ಎಂಆರ್‌ಐ ಸೇವೆ ಬಡ ಮತ್ತು ಮಧ್ಯಮ ವರ್ಗದವರಿಗೆ ಕೈಗೆಟುಕದಷ್ಟು ದುಬಾರಿಯೇ. ರೋಗ ಪತ್ತೆಗಾಗಿ ಇವೆರಡನ್ನೂ



''ಎಲ್ಲರಿಗೂ ಆರೋಗ್ಯ; ಎಲ್ಲೆಡೆಯೂ ಆರೋಗ್ಯ''